ವ್ಯವಸಾಯ ಕಾಲೇಜುಗಳನ್ನು ತೆಗೆಯುವ ಬಗ್ಗೆ ವಿಚಾರವಿರುವಂತೆ ಎಂದು ಕಾಣುತ್ತದೆ. ಎರಡು ವರ್ಷಗಳ ವ್ಯವಸಾಯ ಕೋರ್ಸ್ ಇರುವಂತಹ ಶಾಲೆಗಳನ್ನು ತೆರೆಯಬೇಕೆಂದು ನಾನು ಕೇಳಿದ್ದೇನೆ. ಆದ್ದರಿಂದ ವ್ಯವಸಾಯ ಶಾಲೆಗಳನ್ನು ತೆರೆಯುವುದಕ್ಕೆ ಮಾನ್ಯ ಮಂತ್ರಿಗಳು ಮನಸ್ಸು ಮಾಡುತ್ತಾರೆಯೇ ? ಮತ್ತು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಬಿ. ಎಲ್. ಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಕಳಕಳಿ ಏನು ಎಂಬುದು ನನಗೂ ಕೂಡ ಅರ್ಥವಾಗುತ್ತದೆ. ನಮ್ಮ ರಾಜ್ಯದಲ್ಲಿ ವ್ಯವಸಾಯಗಾರರು ಜಾಸ್ತಿ ಇರುವುದರಿಂದ ಆ ವ್ಯವಸಾಯಗಾರರು ಜಾಸ್ತಿ ಇರುವುದರಿಂದ ಆ ವ್ಯವಸಾಯಗಾರರ ಮಕ್ಕಳಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಎಸ್. ಎಸ್. ಎಲ್. ಸಿ. ಆದ ನಂತರ ಆಥನಾ ಪಿ. ಯು. ಸಿ. ಪಾಸಾದ ವಿದ್ಯಾರ್ಥಿಗಳಿಗೆ ವ್ಯವಸಾಯದ ಕೋರ್ಸ್ ತೆಗೆಯುವ ಬಗ್ಗೆ ಸಲಹೆ ಕೊಡಲು ಶ್ರೀಮಾನ್ ಜಿ. ವಿ ಕೆ ರಾವ್‌ರವರ ನೇತೃತ್ವದಲ್ಲಿ ಒಂದು ಸಮಿತಿ ರಚಿಸಲಾಗಿದೆ. ಆ ಸಮಿತಿಯವರು ಸರ್ಕಾರಕ್ಕೆ ತಮ್ಮ ವರದಿಯನ್ನು ಆದಷ್ಟು ಬೇಗ ಕೊಡುವವರಿದ್ದಾರೆ. ಅವರು ತಮ್ಮ ವರದಿಯನ್ನು ಸರ್ಕಾರಕ್ಕೆ ಕೊಟ್ಟ ನಂತರ ಇದನ್ನು ಆಲೋಚನೆ ಮಾಡಲಾಗುವುದು.

ಶ್ರೀ ಬಿ. ಬೈರಪ್ಪಾ ಜಿ.—ನೇಮಿಸಿರತಕ್ಕಂಥ ಸಮಿತಿಯವರು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ತಕ್ಷಣ ವ್ಯವಸಾಯ ಶಾಲೆಗಳನ್ನು ತೆರೆಯುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ನಾನು ಆಗಲೇ ಉತ್ತರ ಕೊಟ್ಟಿದ್ದೇನೆ. ಸಮಿತಿಯನ್ನು ನೇಮಕ ಮಾಡಿದ್ದೇವೆ. ಅವರು ತಮ್ಮ ವರದಿಯನ್ನು ಆದಷ್ಟು ಬೇಗ ಕೊಡಲಿದ್ದಾರೆ. ಆದರೆ ಈ ವರ್ಷದಲ್ಲಿ ನಾವು ವ್ಯವಸಾಯ ಶಾಲೆಗಳನ್ನು ತೆರೆಯುವುದಕ್ಕೆ ಸಾಧ್ಯವಿಲ್ಲ. ಮುಂದಿನ ವರ್ಷ ಬೇಕಾದರೆ ನೋಡೋಣ.

ಶ್ರೀ ವೈ ರಾಮಕೃಷ್ಣ —ಈ ಸಮಿತಿಯನ್ನು ಯಾವಾಗ ನೇಮಕ ಮಾಡಿದ್ದೀರಿ ? ಈ ಕಮಿಟಿಯ ಟರ್ಮ್ಸ್ ಆಫ್ ರೆಫರನ್ಸ್ ಏನು ? ವ್ಯವಸಾಯ ಶಿಕ್ಷಣವನ್ನು ಪ್ರಾರಂಭ ಮಾಡಲು ಈಗಾಗಲೇ ಏನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಬಿ. ಎಲ್. ಸಧ್ಯಕ್ಕೆ ಈಗ ನನ್ನ ಹತ್ತಿರ ಆ ಬಗ್ಗೆ ಮಾಹಿತಿ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಹಿಂದಿನ ಸರ್ಕಾರವಿದ್ದಾಗಲೇ ಈ ಫೀಲಸ ಮಾಡಬೇಕೆಂದು ಆಲೋಚನೆ ಮಾಡಿತ್ತು. ಅಗ್ರಿಕಲ್ಚರ್ ಕಾಲೇಜುಗಳನ್ನು ಸ್ಥಾಪನೆ ಮಾಡುವ ಬಗ್ಗೆ

ಅಧ್ಯಕ್ಷರು.—ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿರುವುದು ಕಾಲೇಜು ಪ್ರಶ್ನೆಯಲ್ಲ. ವ್ಯವಸಾಯ ಸ್ಕೂಲ್‌ಗಳನ್ನು ಪ್ರಾರಂಭ ಮಾಡುವ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ನಾನು ಆ ವಿಷಯವನ್ನು ಪ್ರಸ್ತಾಪ ಮಾಡುವುದಿಲ್ಲ.

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿನ ಉಪಾಧ್ಯಾಯರ ಹುದ್ದೆಗಳನ್ನು ಭರ್ತಿಮಾಡುವುದು

೪೭ ಶ್ರೀ ಜಿ. ಎಸ್. ದೊಡ್ಡಮೇಟಿ (ರೋಣ)—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ಶಿಕ್ಷಕರ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? (ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ಶಿಕ್ಷಕರ ಕೊರತೆಯ ಪ್ರತ್ಯೇಕ ಸಂಖ್ಯೆಯನ್ನು ಕೊಡುವುದು)

(ಆ) ಈ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ, (ಶಿಕ್ಷಣ ಮಂತ್ರಿಗಳು).—

(ಅ) ಬಂದಿದೆ. ತರಗತಿ ಒಂದರಿಂದ ಏಳರವರೆಗಿನ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರ ಕೊರತೆ–೧೫,೬೯೭.

(ಆ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಜಿಲ್ಲಾಮಟ್ಟದ ನೇಮಕಾತಿ ಸಮಿತಿಗಳನ್ನು ಈಗಾಗಲೇ ರಚಿಸಲಾಗಿದ್ದು, ಈ ಸಮಿತಿಗಳ ಮೂಲಕ ಎಲ್ಲಾ ಖಾಲಿಯಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿಮಾಡಲಾಗುತ್ತದೆ.

ಶ್ರೀ ಜಿ. ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ಮಾನ್ಯಮಂತ್ರಿಗಳು ಮಾತನಾಡುತ್ತಾ ಸುಮಾರು ೧೩,೬೯೭ ಜನ ಉಪಾಧ್ಯಾಯರ ಕೊರತೆ ಇದೆಯೆಂದು ಹೇಳಿದರು. ಆದರೆ ಇದರಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಉಪಾಧ್ಯಾಯರ ಸಂಖ್ಯೆ ಎಷ್ಟು ?

ಶ್ರೀ ಬಿ. ರಾಚಯ್ಯ.—೭೫೨೨ ಜನ ಪ್ರಾಥಮಿಕ ಶಾಲಾ ಉಪಾಧ್ಯಾಯರು. ಇನ್ನು ಉಳಿದವರು ಮಾಧ್ಯಮಿಕ ಶಾಲಾ ಉಪಾಧ್ಯಾಯರು.

ಯಾವ ವರ್ಷದಿಂದ ಖಾಲಿ ಇವೆ ಎಂದು ಈಗ ನಾನು ಹೇಳಲಾರೆ. ಆದರೆ ಕಳೆದ ಮೂರು-ನಾಲ್ಕು ವರ್ಷಗಳಿಂದ ಈ ಹುದ್ದೆಗಳನ್ನು ಭರ್ತಿಮಾಡುತ್ತಿದ್ದೇವೆ.

ಡಾ. ವಿ. ಎಸ್. ಆಚಾರ್ಯ.—ಜಿಲ್ಲಾ ಮಟ್ಟದಲ್ಲಿ ನೇಮಕಾತಿ ಸಮಿತಿಗಳನ್ನು ಮಾಡಲಾಗಿದೆಯೆಂದು ಹೇಳಿದ್ದೀರಿ. ಇಷ್ಟು ಅವಧಿಯೊಳಗೆ ಈ ನೇಮಕಾತಿಗಳು ಆಗಬೇಕೆಂದು ಸಮಯಾವಕಾಶವನ್ನು ನಿಗದಿ ಪಡಿಸಿದ್ದೀರಾ ಹೇಗೆ ? ಏಕೆಂದರೆ ಈ ಹುದ್ದೆಗಳು ಬಹಳ ಸಮಯದಿಂದ ಖಾಲಿ ಇವೆಯೆಂದು ತಾವು ಹೇಳಿದ್ದೀರಿ.

ಶ್ರೀ ಬಿ. ರಾಚಯ್ಯ.—ನಾವು ಅವರಿಗೆ ಎರಡು ತಿಂಗಳೊಳಗಾಗಿ, ಈ ನೇಮಕಾತಿಗಳನ್ನು ಮಾಡಬೇಕೆಂದು ಪ್ರಾರ್ಥಿಸಿಕೊಂಡಿದ್ದೇವೆ.

ಶ್ರೀ ಎನ್. ಹುಚ್ಚಪ್ಪಾಸ್ವಿಗೌಡ.—ನೇಮಕಾತಿ ಸಮಿತಿಗಳನ್ನು ಮಾಡಿದರೂ ಕೂಡ ಈ ವರ್ಷವೇ ಉಪಾಧ್ಯಾಯರ ನೇಮಕಾತಿ ಸಾಧ್ಯವಾಗಲಾರದು. ಆದ್ದರಿಂದ ಸ್ಥಳೀಯವಾಗಿ ಒಂದು ವರ್ಷದ ಮಟ್ಟಿಗಾದರೂ ಉಪಾಧ್ಯಾಯರನ್ನು ನೇಮಿಸಿಕೊಳ್ಳುವುದಕ್ಕೆ ಸರ್ಕಾರ ಅಪ್ಪಣೆ ಕೊಡಬೇಕು. ತತ್‌ಕ್ಷಣ ಇದನ್ನು ಮಾಡುತ್ತೀರಾ ಸ್ವಾಮಿ ?

ಶ್ರೀ ಬಿ. ರಾಚಯ್ಯ.—ಈ ರೀತಿ ಮಾಡಬೇಕೆಂದು ನಮಗೆ ಆಸೆ ಇದ್ದರೂ ಕೂಡ ಉಚ್ಚನ್ಯಾಯಾಲಯ ಈ ರೀತಿ ತಾತ್ಕಾಲಿಕವಾಗಿ ನೇಮಕಾತಿಗಳನ್ನು ಮಾಡಕೂಡದೆಂದು ನಿರ್ಣಯ ಮಾಡಿದೆ. ಇದು ನಮಗೆ ಕಷ್ಟಕ್ಕೆ ಬಂದಿದೆ. ಆದ್ದರಿಂದ ಇದನ್ನು ಮಾಡಲಿಕ್ಕೆ ಸಾಧ್ಯವಾಗಲಾರದು.

ಶ್ರೀ ಮಲ್ಲಿಕಾರ್ಜುನಖಾರ್ಗೆ.—ಹಾಗಿದ್ದರೆ ಸದ್ಯಕ್ಕೆ ಬೇರೆ ಏನು ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಬಿ. ರಾಚಯ್ಯ.—ಈಗ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಉಪಾಧ್ಯಾಯರನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಕೈಗೊಂಡಿದ್ದೇವೆ, ಆದರ ಪ್ರಕಾರ ಸರ್ಕಾರ ಆದೇಶ ಕಳಿಸುತ್ತಿದೆ.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ, ಈಗ ಮಾನ್ಯ ವಿದ್ಯಾಮಂತ್ರಿಗಳು ಆರು ಸಾವಿರ ಖಾಯಂ ಹುದ್ದೆಗಳು ಮತ್ತು ಏಳು ಸಾವಿರ ತಾತ್ಕಾಲಿಕ ಹುದ್ದೆಗಳು ಸೇರಿ ಒಟ್ಟು ಹದಿಮೂರು ಸಾವಿರ ಹುದ್ದೆಗಳಿವೆ ಎಂದು ಹೇಳಿದರು. ಈಗಾಗಲೇ ಏಳು ತಿಂಗಳಿಂದ ಅವರು ವಿದ್ಯಾ ಇಲಾಖೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇದರಲ್ಲಿ ಈ ೧೮ ಪರ್ಸೆಂಟ್ ಹುದ್ದೆಗಳು ಭರ್ತಿಯಾಗಿಲ್ಲ. ಈ ೧೩ ಸಾವಿರದಲ್ಲಿ ಸ್ಪೆಶಲ್ ರಿಕ್ರೂಟ್‌ಮೆಂಟ್ ಪ್ರಕಾರ ೧೫ ಪರ್ಸೆಂಟ್ ಮತ್ತು ಹಾವನೂರ್ ಕಮೀಶನ್ ಶಿಫಾರಸ್ಸು ಪ್ರಕಾರ ೧೫ ಪರ್ಸೆಂಟ್ ಭರ್ತಿಮಾಡುವುದನ್ನು ಅಳವಡಿಸಿಕೊಂಡಿದ್ದೀರೋ ಹೇಗೆ ?

ಶ್ರೀ ಬಿ. ರಾಚಯ್ಯ.—ಹೈಕೋರ್ಟಿನ ಆದೇಶದ ಪ್ರಕಾರ ಸ್ಟೆಬ್ಲೆಫೆಂಡರಿ ಪದವೀಧರರಿಗೆ ೫೦ ಪರ್ಸೆಂಟಿನಷ್ಟು ಹುದ್ದೆಗಳನ್ನು ವಿಾಸಲಾಗಿಡಬೇಕೆಂದು ಹೇಳಲಾಗಿದೆ. ಇದೆಲ್ಲಾ ಆದಮೇಲೆ ಹಿಂದಿನಂತೆ ಲೆಕ್ಕ ಹಾಕಿದಾಗ ನಮಗೆ ಎಷ್ಟು ಕೊರತೆ ಬರುತ್ತದೆ ಎಂದು ತಿಳಿದುಕೊಂಡು ಹಿಂದುಳಿದ ವರ್ಗದವರಿಗೆ, ಹರಿಜನ ಗಿರಿಜನ ವರ್ಗದವರಿಗೆ ಈ ಕೊರತೆಯನ್ನು ತುಂಬಿಸುವುದಕ್ಕೆ ವಿಶೇಷ ನೇಮಕಾತಿ ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ —ಶಿವಮೊಗ್ಗ ಜಿಲ್ಲೆಯಲ್ಲಿ ಸ್ಥಳೀಯ ಅಭ್ಯರ್ಥಿಗಳ ನೇಮಕವೇ ಆಗಿಲ್ಲ. ಕೆಲವು ಶಾಲೆಗಳಲ್ಲಿ ಒಬ್ಬರೂ ಕೂಡ ಶಿಕ್ಷಕರಿಲ್ಲದೆ ಪರಿಸ್ಥಿತಿ ಚಿಂತಾಜನಕವಾಗಿದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಕೂಡಲೇ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಈಗ ತಾತ್ಕಾಲಿಕವಾಗಿ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಆವರನ್ನು ನೇಮಿಸಿಕೊಳ್ಳುವುದಕ್ಕೆ ಆದೇಶವನ್ನು ಕೊಡುತ್ತಿದ್ದೇವೆ. ಈ ಬಗ್ಗೆ ಹಣಕಾಸು ಇಲಾಖೆಯಲ್ಲಿ ಮತ್ತು ಯೋಜನಾ ಇಲಾಖೆಯಲ್ಲಿ ಇಲ್ಲಿಯವರೆಗೆ ವ್ಯವಹಾರ ನಡೆಯುತ್ತಿದ್ದುದು ಈಗ ಅನುಮತಿ ಸಿಕ್ಕಿದೆ ಆದ್ದರಿಂದ ಈಗ ನೇಮಕಾತಿಗಳನ್ನು ಮಾಡುತ್ತಿದ್ದೇವೆ. ಬಹುಶಃ ಹೈಕೋರ್ಟಿನಿಂದ ತಡೆಯಾಜ್ಞೆ ಬಂದಿದ್ದರಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಶಿಕ್ಷಕರನ್ನು ಭರ್ತಿ ಮಾಡುವುದಕ್ಕೆ ಸಾಧ್ಯವಾಗಿರಲಿಲ್ಲ. ಇದ್ದಂತಹ ಶಿಕ್ಷಕರು ಬೇರೆ ಕಡೆಗಳಿಗೆ ವರ್ಗಮಾಡಿಸಿಕೊಂಡು ಹೊರಟು ಹೋಗಿದ್ದರು. ಇದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಬಿ. ಆರ್ ಪಾಟೀಲ್.—ಸ್ಕೈಪೆಂಡರಿ ಪದವೀಧರರಿಗೆ ೫೦ ಪರ್ಸೆಂಟ್ ಮಿನಿಸಲಾತಿ ಕೊಡ ಬೇಕೆಂದಿರುವುದು ಸರಿ. ಆದರೆ ಶಿಕ್ಷಕರನ್ನು ನೇಮಕ ಮಾಡುವಾಗ ತರಬೇತಿ ಹೊಂದಿರಬೇಕೆಂಬ ನಿಯಮ ಇದೆ. ಹೆಚ್ಚಿನ ಪದವೀಧರರು ತರಬೇತಿಯನ್ನು ಹೊಂದಿಲ್ಲ. ಈ ಸಮಸ್ಯೆಯನ್ನು ಹೇಗೆ ಬಗೆಹರಿಸುತ್ತೀರಿ ?

ಶ್ರೀ ಬಿ. ರಾಚಯ್ಯ.—ಸರ್ಕಾರದ ಖಾಯಿದೆಯ ಪ್ರಕಾರ ಅರ್ಹತೆಯನ್ನು ಸಡಿಲ ಮಾಡುವುದಕ್ಕೆ ಆಗುವುದಿಲ್ಲ, ಯಾರ್ಯಾರಿಗೆ ಅರ್ಹತೆ ಇದೆ, ಅವರನ್ನು ಪರ್ಸೆಂಟೇಜ್ ಆಧಾರದ ಮೇಲೆ ನೇಮಕ ಮಾಡಬೇಕೆಂದು ನ್ಯಾಯಾಲಯದ ಆದೇಶ ಇದೆ. ಬೇರೆಯವರಿಗೆ ಬೇರೆ ಇಲಾಖೆಗಳಲ್ಲೂ ಕೆಲಸ ಕೊಡುವುದಕ್ಕೆ ಸಾಧ್ಯವಾಗಬಹುದು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಈಗಾಗಲೇ, ಸ್ಥಳೀಯ ಅಭ್ಯರ್ಥಿಗಳಾಗಿ ಅನೇಕ ಜನ ಕೆಲಸ ಮಾಡುತ್ತಿದ್ದಾರೆ. ಸ್ಕೈಪೆಂಡರೀ ಪದವೀಧರರನ್ನು ೫೦ ಪರ್ಸೆಂಟ್‌ನಷ್ಟು ಅಬ್ಸರ್ವ್ ಮಾಡ ಬೇಕೆಂದು ತೀರ್ಮಾನ ಮಾಡಿರುವುದು ಸಂತೋಷ. ಅದೇ ರೀತಿ ಸ್ಥಳೀಯ ಅಭ್ಯರ್ಥಿಗಳನ್ನು ಕೂಡ ಅಬ್ಸರ್ವ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಹೈಕೋರ್ಟಿನಲ್ಲಿ ತಡೆಯಾಜ್ಞೆಯಿಂದ ತಡವಾಯಿತೆಂದು ತಾವು ಹೇಳುತ್ತಿದ್ದೀರಿ, ಹೈಕೋರ್ಟಿನಲ್ಲಿ ಕೇಸ್ ಹಾಕಿದವರು ಯಾರು ? ಮತ್ತು ಇದರಿಂದ ಯಾವ್ಯಾವ ವರ್ಗದವರಿಗೆ ಎಫೆಕ್ಟ್ ಆಗಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಬಿ. ರಾಚಯ್ಯ.—ಈ ವಿವರಗಳನ್ನು ಈಗ ಹೇಳುವುದಕ್ಕೆ ಆಗದಿದ್ದರೂ, ಸ್ಕೈಪೆಂಡರಿ ಪದವೀಧರರನ್ನು ಮತ್ತು ಸ್ಥಳೀಯ ಅಭ್ಯರ್ಥಿಗಳನ್ನು ಇಷ್ಟಿಷ್ಟು ಸಂಖ್ಯೆಯಲ್ಲಿ ಆಧ್ಯತೆ ಕೊಟ್ಟು ನೇಮಿಸಿ ಕೊಳ್ಳಬೇಕೆಂದು ಹಿಂದಿನ ಸರ್ಕಾರ ಒಂದು ಹಂತದಲ್ಲಿ ತೀರ್ಮಾನ ಮಾಡಿತ್ತು. ಈ ಹಂತದಲ್ಲಿ ಆವರು ಹೈಕೋರ್ಟ್‌ನಿಂದ ಸ್ಟೇ ಆರ್ಡರ್ ತಂದರು. ೨೯ ರಿಂದ ೪೦ ವರ್ಷದವರನ್ನು ಮಾತ್ರ ಆಯ್ಕೆಮಾಡ ಬೇಕೆಂದು ಹಿಂದಿನ ಸರ್ಕಾರ ತೀರ್ಮಾನಿಸಿತ್ತು. ಆದರೆ ಇದನ್ನು ಹೈಕೋರ್ಟ್ ಅನೂರ್ಜಿತ ಗೊಳಿಸಿದ ಮೇಲೆ ಈ ಕಾನೂನನ್ನು ಬದಲಾಯಿಸಿ ೧೮ ವರ್ಷಕ್ಕೆ ಮೇಲ್ಪಟ್ಟು ೪೩ ವರ್ಷದೊಳಗಿನ ಯಾರು ಬೇಕಾದರೂ ಕೂಡ ಅರ್ಜಿ ಹಾಕಬಹುದೆಂದು ಕಾನೂನನ್ನು ಬದಲಾಯಿಸಿದ್ದೇವೆ. ಎಲ್ಲಾ ಕಡೆಗೂ ಅರ್ಜಿ ಹಾಕಿದರೆ ಖರ್ಚು ಜಾಸ್ತಿಯಾಗುತ್ತದೆಂದು ಅರ್ಜಿ ಶುಲ್ಕ ೫ ರೂಪಾಯಿ ಇದ್ದುದನ್ನು ಇವರಿಗೆ ಈಗ ಒಂದು ರೂಪಾಯಿ ಅರ್ಜಿ ಶುಲ್ಕ ಸಾಕೆಂದು ಬದಲಾಯಿಸಿದ್ದೇವೆ.

ರಾಜ್ಯದಲ್ಲಿ ಕುಡಿಯಲಿಂವ ನೀರಿನ ಕೊರತೆ

ಶ್ರೀ ಗೋವಿಂದ ಪಿ. ಒಡೆಯರಾಜ್.(ಕಮಲಾಪುರ) ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ತಿ ರಾಜ್ಯ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದ ಗ್ರಾಮೀಣ ಪ್ರದೇಶದಲ್ಲಿನ ಬಹುತೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ರಾಜ್ಯದಲ್ಲಿ ಅಂತಹ ಗ್ರಾಮಗಳ ಸಂಖ್ಯೆ ಎಷ್ಟು ?

ಇ) ಅಂತಹ ಎಲ್ಲಾ ಗ್ರಾಮಗಳಿಗೆ ಕುಡಿಯಲಿಂವ ನೀರನ್ನೊದಗಿಸಲು ಸರ್ಕಾರ ಕೈಕೊಂಡ ಕ್ರಮ ಮತ್ತು ಅದಕ್ಕೆ ಬೇಕಾದ ಸಮಯ ಎಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್.—(ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಮಂತ್ರಿಗಳು).—